
# ಶ್ರೀ ಶ್ರೀರಾಮಕೃಷ್ಣ ಭಾಗವತಮ್

ಆನೆಯನ್ನು ಕಾಣಲು ಹೋದ ಕುರುಡುರು ಅದರ ಒಂದೊಂದು ಅವಯವವನ್ನು ಮುಟ್ಟಿ, ಅದು ಗೋಡೆಯಂತೆ ಇದೆ, ಮೊರದಂತೆ ಇದೆ... ಎಂದು ವಿವರಿಸಿದ ಕಥೆಯನ್ನು ಶ್ರೀರಾಮಕೃಷ್ಣರು ಹೇಳುತ್ತಾರೆ. ಅದರಲ್ಲಿ ಪ್ರತಿಯೊಂದೂ ಆನೆಯ ಸ್ವರೂಪವೇ ಆದರೂ ಆಂಶಿಕ ಮಾತ್ರ, ಪೂರ್ಣಸ್ವರೂಪವಲ್ಲ. ಒಂದು ಲೌಕಿಕವಾದ ಆನೆಯನ್ನೇ ಪರಿಪೂರ್ಣವಾಗಿ ಅರಿತುಕೊಳ್ಳಲಾಗದಷ್ಟು ಪರಿಮಿತ ಬುದ್ಧಿ ಮಾನವನದು. ಅಂತಹ ಮತಿಯ ಸಹಾಯದಿಂದ ಪರಿಪೂರ್ಣ ಪರಬ್ರಹ್ಮವನ್ನು ಅರಿಯುವುದು! ಅದನ್ನು ಮಾತಿಗೆ ಸಿಲುಕಿಸುವುದು ಸಾಧ್ಯವೆ? ಆದುದರಿಂದಲೇ ಪ್ರಪಂಚದಲ್ಲಿರುವ ಎಲ್ಲಾ ಚರಾಚರಗಳನ್ನು ಪರಬ್ರಹ್ಮವಾಗಿಯೇ ಕಾಣುತ್ತಿದ್ದ ಶುಕರನ್ನೂ, ವ್ಯಾಸರನ್ನೂ ಸಕ್ಕರೆ ಬೆಟ್ಟಕ್ಕೆ ಹೋಗಿ ಕಣಗಳನ್ನು ಹೊತ್ತ ಇರುವೆಗಳೆಂದು ಶ್ರೀರಾಮಕೃಷ್ಣರು ಹೇಳಿದ್ದಾರೆ. ಅಂದರೆ, ಪರಿಪೂರ್ಣ ಬ್ರಹ್ಮವನ್ನು ಯಾರು ಯಾರು ಎಷ್ಟು ಎಷ್ಟು ಬಣ್ಣಿಸಿದರೂ ಅದನ್ನು ಕುರಿತು ಹೇಳಬೇಕಾದುದು ಇನ್ನೂ ಉಳಿದೇ ಇರುತ್ತದೆ. ಈ ಮಾತು ಶ್ರೀರಾಮಕೃಷ್ಣರ ದಿವ್ಯ ಲೀಲಾವಿನೋದಗಳಿಗೂ ಅನ್ವಯಿಸುತ್ತದೆ. ಶ್ರೀರಾಮಕೃಷ್ಣರ ಪರಮಪಾವನವಾದ ಮಂಗಳ ಚರಿತೆಯನ್ನು ತಿಳಿಸುವ 'ಲೀಲಾ ಪ್ರಸಂಗ','ಯುಗಾವತಾರ ಶ್ರೀರಾಮಕೃಷ್ಣ' ಮೊದಲಾದ ಅನೇಕ ಕೃತಿಗಳಿದ್ದರೂ, ಅವರನ್ನು ತಾವು ಕಂಡು ಅನುಭವಿಸಿದ ನೆಲೆಯಿಂದ ವಿವರಿಸಲು ಇನ್ನೂ ವಿಚಾರಗಳು ಉಳಿದಿರುತ್ತವೆ.

ಶ್ರೀರಾಮಕೃಷ್ಣರ ಭಗವದ್ಭಾವವನ್ನೂ ಭಾಗವತದ ಮೇಲಿನ ಪ್ರೇಮವನ್ನೂ, ಲೋಕಕಾರುಣ್ಯವನ್ನೂ ಚಿತ್ರಿಸುವ **'ಶ್ರೀರಾಮಕೃಷ್ಣ ಭಾಗವತಂ'** ಎಂಬುದು ಶ್ರೀರಾಮಕೃಷ್ಣರ ಬೇರೊಂದು ಆಯಾಮವನ್ನು ಚಿತ್ರಿಸುವ ಇತರ ಕೃತಿಗಳಿಗಿಂತ ವಿಭಿನ್ನವೂ ವಿಶಿಷ್ಟವೂ ಆದ ಕೃತಿಯಾಗಿದೆ.

ಇದನ್ನು ರಚಿಸಿದವರು ರಾಮೇಂದ್ರ ಸುಂದರ ಭಟ್ಟಾಚಾರ್ಯರು. ಇವರ ಸುಮಾರು ೫೦ನೇ ವಯಸ್ಸಿನಲ್ಲಿ ಶ್ರೀರಾಮಕೃಷ್ಣರು ಕಾಣಿಸಿಕೊಂಡು 'ಮಲ್ಲೀಲಾಂ ವಿಲಿಖ ತ್ವಂ ಭೋ ದೇವಭಾಷಾಯುತಾಂ ಸುಧೀಃ' ಎಂದು ಹೇಳಿದರಂತೆ. ತಮ್ಮ ೮೦ನೇ ವಯಸ್ಸಿನವರೆಗೆ ಎಷ್ಟೋ ಬಾರಿ ಈ ವಿಚಾರ ಅವರ ಕನಸಿನಲ್ಲಿ ಮರುಕಳಿಸಿದ್ದರೂ ಕವಿ ಇದನ್ನು ಕಾರ್ಯಗತಗೊಳಿಸಿರಲಿಲ್ಲ. ಇವರ ತಂದೆ ಶ್ರೀರಾಮಕೃಷ್ಣರ ಸಮವಯಸ್ಕರರು ಮತ್ತು ಅವರ ಮಹಿಮೆಯನ್ನು ಬಲ್ಲವರಾಗಿದ್ದರು. ಶ್ರೀರಾಮೇಂದ್ರರು ೮ನೇ ವಯಸ್ಸಿನಲ್ಲಿದ್ದಾಗ ಅವರ ತಂದೆ ಅವರನ್ನು ಶ್ರೀರಾಮಕೃಷ್ಣರ ಬಳಿ ಕರೆದುಕೊಂಡು ಹೋಗಿದ್ದರು. 'ಇದೋ ಜೀವಂತ ಭಗವಂತ, ಪಾದಸ್ಪರ್ಶ ಮಾಡು; ಚರಣಧೂಳಿ ತೆಗೆದುಕೋ' ಎಂದು ಹೇಳಿ




| | |
|---|---|
| *ಕೃತಿ* | : ಶ್ರೀ ಶ್ರೀರಾಮಕೃಷ್ಣ ಭಾಗವತಮ್ |
| *ಸಂಸ್ಕೃತ ಮೂಲಕರ್ತೃ* | : ರಾಮೇಂದ್ರಸುಂದರ ಭಟ್ಟಾಚಾರ್ಯ- ಭಕ್ತಿತೀರ್ಥ |
| *ಕನ್ನಡಾನುವಾದ ಕರ್ತೃ* | : ಡಾ. ಆರೂಢಭಾರತೀ |
| *ಪ್ರಕಾಶಕರು* | : ರಾಮಕೃಷ್ಣ ಮಠ, ಬೆಂಗಳೂರು – 560 019. ದೂ: 26616060, 26616161 |

*ಪುಟಗಳು:* **584** *ಬೆಲೆ* : **250/**

ಅವರ ತಲೆಯನ್ನು ಶ್ರೀರಾಮಕೃಷ್ಣರ ಪಾದದ ಮೇಲೆ ಇರಿಸಿದರು. ಶ್ರೀರಾಮಕೃಷ್ಣರು, 'ಏಳು ಮಗು, ನೀನು ದೀರ್ಘಾಯುಷಿಯೂ ಪಂಡಿತನೂ ಆಗುವೆ' ಎಂದು ಆಶೀರ್ವದಿಸಿದ್ದರು. ಇಷ್ಟುಬಿಟ್ಟರೆ ಕವಿ ರಾಮೇಂದ್ರರಿಗೆ ಶ್ರೀರಾಮಕೃಷ್ಣರ ಬಗ್ಗೆ ಬೇರೆ ಪರಿಚಯ ಇರಲಿಲ್ಲ. ಕನಸಿನಲ್ಲಿ 'ಮಲ್ಲೀಲಾಂ ವಿಲಿಖ...' ಎಂದು ಕಂಡಾಗ ಶ್ರೀರಾಮಕೃಷ್ಣರ ಸಮಕಾಲೀನರೂ ಮತ್ತು ಅವರ ಕೆಲವು ನೇರ ಶಿಷ್ಯರು ಇದ್ದರೂ, ಕವಿ ಸಂಸಾರ, ಅಧ್ಯಾಪನ ಮೊದಲಾದವುಗಳಲ್ಲಿ ಸಿಲುಕಿಕೊಂಡು ಈ ಕೆಲಸ ಮಾಡಲೇ ಇಲ್ಲ. ಕವಿಯ ೮೦ನೇ ವಯಸ್ಸಿನಲ್ಲೂ 'ಮಲೀಲಾ ವಿಲಿಖ ತ್ವಂ..' ಎಂಬ ಕನಸು ಪುನ

ರಾವರ್ತನೆಯಾಯಿತು. ಆಗ ಕವಿ ತನ್ನ ವಯಸ್ಸು , ಅಶಕ್ತತೆ, ಅನಾರೋಗ್ಯ, ಶ್ರೀರಾಮಕೃಷ್ಣರ ಕುರಿತು ಏನೂ ತಿಳಿದಿಲ್ಲ... ಇದೇ ಮೊದಲಾದ ನೆಪಗಳನ್ನೊಡ್ಡಿ ಕಾವ್ಯ ರಚಿಸಲು ಮುಂದಾಗಲಿಲ್ಲ.

ಬೇಡನೊಬ್ಬ ಜೋಡಿಹಕ್ಕಿಗಳಲ್ಲಿ ಒಂದನ್ನು ಬಾಣದಿಂದ ಹೊಡೆದ ದೃಶ್ಯವನ್ನು ಕಂಡು ಮರುಗಿದ ವಾಲ್ಮೀಕಿಗಳ ಬಾಯಿಂದ 'ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ..' ಶ್ಲೋಕ ಅರಿಯದೇ ಹೊಮ್ಮಿಬಿಟ್ಟಿತು. ಈ ಛಂದೋಬದ್ಧ ವಾಕ್ಯ ಎಲ್ಲಿಂದ ಬಂದಿತು? ಯಾಕೆ ಬಂದಿತು? ಇತ್ಯಾದಿ ಚಿಂತನೆಗಳ ಸಾಲು ವಾಲ್ಮೀಕಿ ಮನಸ್ಸನ್ನು ತುಂಬಿಕೊಂಡುಬಿಟ್ಟವು. ಆಗ ಬ್ರಹ್ಮ ಪ್ರತ್ಯಕ್ಷನಾಗಿ 'ಇದು ನನ್ನಿಚ್ಛೆಯಂತೆಯೇ ಬಂದಿದೆ, ಈ ವಯಸ್ಸಿನಲ್ಲಿ ರಾಮನ ಕಥೆಯನ್ನು ಬರೆ' ಎಂದು ಆದೇಶಿಸಿದನು. 'ರಾಮ' ಎಂದರೆ ಯಾರು ಏನೂ ಗೊತ್ತಿಲ್ಲವಲ್ಲ , ಅವನ ಕಥೆ ಏನು ಬರೆಯಲಿ? ಎಂದು ವಾಲ್ಮೀಕಿಗಳು ಕಂಗೆಟ್ಟರು. ಅದಕ್ಕೆ ಬೇಕಾದ ಎಲ್ಲ ಅಂಶ ಗಳನ್ನೂ ನಾರದರ ಮೂಲಕ ತಿಳಿಸಿಕೊಟ್ಟ.

ಇಲ್ಲಿ ಶ್ರೀರಾಮಕೃಷ್ಣರೇ ಕವಿಗೆ ಅಗತ್ಯವಾದ ಎಲ್ಲಾ ವಿಷಯ ಗಳನ್ನು ಅಗತ್ಯ ಬಿದ್ದಾಗ ತಾವೇ ತೋರಿ ಕೊಡುವುದಾಗಿ ಹೇಳಿ, ಕವಿಯನ್ನು ಈ ಕೃತಿ ರಚನೆಗೆ ಪ್ರೇರೇಪಿಸಿದರು. ಹಾಗಾಗಿ ಕವಿ ಅವರ ಆಶೀರ್ವಾದದಿಂದ ಪಡೆದ ಪಾಂಡಿತ್ಯ, ಆಯುಸ್ಸನ್ನು ಅವರಿಗೇ ಕೃತಿಯ ಮೂಲಕ ಅರ್ಪಿಸಲು ಮುಂದಾದದರು. ಕವಿ ರಾಮೇಂದ್ರರು ಈ ಕೃತಿಯನ್ನು ರಚಿಸಲು ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ಶಾರದಾನಂದರ 'ಶ್ರೀರಾಮಕೃಷ್ಣ ಲೀಲಾ ಪ್ರಸಂಗ'ವನ್ನು ಪ್ರಧಾನವಾಗಿ ಆಶ್ರಯಿಸಿರುವುದಾಗಿ ಹೇಳಿ ಕೊಂಡಿದ್ದಾರೆ.

ಆದರೂ ಇದರಲ್ಲಿ ಇತರ ಕೃತಿಗಳಲ್ಲಿ ಕಾಣದ ಕೆಲವು ವಿಶಿಷ್ಟ ಪ್ರಸಂಗಗಳು ದಾಖಲಾಗಿದೆ. (೧) ಶ್ರೀಮಂತ ಲಾಹಾ ಮನೆಯಲ್ಲಿ ಘನವಿದ್ವಾಂಸರ ಮಹಾಸಭೆ ಸೇರಿತ್ತು. ಅಲ್ಲಿ ಒಂದು ಗಹನವಾದ ವಿಷಯ ಕುರಿತು ಬಹು ದೀರ್ಘಕಾಲ ಚರ್ಚೆ ನಡೆಯಿತು. ಆದರೂ ಯಾವ ತೀರ್ಮಾನವೂ ಆಗಲಿಲ್ಲ. ಇದನ್ನೆಲ್ಲಾ ಕೇಳುತ್ತಾ ಕುಳಿತಿದ್ದ ಬಾಲಕ ಗದಾಧರ ಈ ಸಮಸ್ಯೆಯನ್ನು ಸುಲಲಿತವಾಗಿ ಪರಿಹರಿಸಿದ ಎಂದಷ್ಟೇ ಶ್ರೀರಾಮಕೃಷ್ಣ ಜೀವನ ಚರಿತ್ರೆಗೆ ಸಂಬಂಧಿಸಿದ ಎಲ್ಲಾ ಕೃತಿಗಳೂ ತಿಳಿಸುತ್ತವೆ. ಆದರೆ ಈ ಕೃತಿಯಲ್ಲಿ ಅಲ್ಲಿ ಚರ್ಚಿಸಿದ ವಿಷಯ ಯಾವುದು, ಅದಕ್ಕೆ ಶ್ರೀರಾಮಕೃಷ್ಣರು (ಬಾಲಕ ಗದಾ ಧರ) ಕೊಟ್ಟ ಪರಿಹಾರ ಏನು ಎಂಬುದನ್ನು ತಿಳಿಸಲಾಗಿದೆ.

(೨) ವೈಕುಂಠನಾಥ ಸಂನ್ಯಾಲನಿಗೆ ಶ್ರೀರಾಮಕೃಷ್ಣರು ರಾಮಾ ಯಣದ ಶಬರೀ ವೃತ್ತಾಂತವನ್ನು ಓದಲು ಹೇಳಿದ್ದರು. ಸಂನ್ಯಾಲ ಕಕ್ಕಾಬಿಕ್ಕಿಯಾಗಿ ಅವರನ್ನೇ ನೋಡತೊಡಗಿದ. 'ರಾಮಾಯಣ ಯಾರ ಕಥೆಯೋ ಅವನೇ ನಾನಾಗಿದ್ದೇನೆ ನಿನಗೆ ಸಂಶಯವಿದ್ದರೆ ಕೇಳು' ಎಂದು ಹೇಳಿ ವಾಲ್ಮೀಕಿ ರಾಮಾಯಣದ ಅರಣ್ಯಕಾಂಡದ ೭೪ನೇ ಅಧ್ಯಾಯವನ್ನು ತಾವೇ ಹೇಳತೊಡಗಿದರು. ಈ ಪ್ರಸಂಗ ವನ್ನು ಕವಿ ರಾಮೇಂದ್ರನಿಗೆ ಶ್ರೀರಾಮಕೃಷ್ಣರು ತಿಳಿಸಿ, ಕವಿಯ ಮುಂದೆಯೂ ಆ ಅಧ್ಯಾಯವನ್ನು ಸುಸ್ಪಷ್ಟವಾಗಿ ಹೇಳಿದರಂತೆ. ಈ ಪ್ರಸಂಗ ಬೇರೆಲ್ಲೂ ದಾಖಲಾಗಿಲ್ಲ.

ಇಂತಹ ಹಲವು ವಿಶೇಷಗಳ ಆಕರ ಗ್ರಂಥವಿದು. ಇದರಲ್ಲಿ ಒಟ್ಟು ೨೯೮೯ ಶ್ಲೋಕಗಳನ್ನೊಳಗೊಂಡ ಆದಿ ಲೀಲಾ, ಮಧ್ಯ ಲೀಲಾ, ಅಂತ್ಯಲೀಲಾ ಎಂಬ ಮೂರು ಪ್ರಕರಣಗಳಿವೆ. ಜೊತೆಗೆ ೨೧ ಶ್ಲೋಕಗಳ ಸ್ತುತಿ ಅಧ್ಯಾಯ, ೨೧ ಶ್ಲೋಕಗಳ ಪರಿಶಿಷ್ಟ ಅಧ್ಯಾಯ ಗಳಿವೆ. ಸಾಧಾರಣವಾಗಿ ಎಲ್ಲರೂ ಸುಲಭವಾಗಿ ಅರಿಯಬಹು ದಾದ ಸರಳ ಸಂಸ್ಕೃತಭಾಷೆಯಲ್ಲಿ ಇದು ರಚಿತವಾಗಿದೆ. ವಿಶೇಷ ವಾಗಿ ಅನುಷ್ಟುಪ್ ಛಂದಸ್ಸು , ಉಪಜಾತಿ ಛಂದಸ್ಸುಗಳೇ ಇವೆ. ಅಲ್ಲೊಂದು ಇಲ್ಲೊಂದು ಮಂದಾಕ್ರಾಂತ, ಶಾರ್ದೂಲವಿಕ್ರೀಡಿತ ಛಂದಸ್ಸಿನ ಶ್ಲೋಕಗಳೂ ಕಂಡುಬರುತ್ತವೆ. ಅಂತ್ಯಲೀಲಾ ಭಾಗ ಹಾಗೂ ಪರಿವಿಷ್ಟ ಅಧ್ಯಾಯಗಳಲ್ಲಿ ಅಲ್ಲಲ್ಲಿ ಗದ್ಯಖಂಡಗಳೂ ಇವೆ. 'ಯಾರಿಗೆ ಯಾರೂ ಸುಖವನ್ನೂ ದುಃಖವನ್ನೂ ಕೊಡಲಾರ. ಪುರು ಷನು ತನ್ನ ತನ್ನ ಕರ್ಮದ ಫಲವನ್ನೇ ಉಣ್ಣುತ್ತಾನೆ.' *(ಪು. ೩ , ಶ್ಲೋ. ೧೫)* ಒಬ್ಬರ ಮೇಲೆ ಬಹು ಕಾರ್ಯಭಾರ ಬಿದ್ದರೆ ಕೆಲಸವೂ ಸುಸಂಪನ್ನವಾಗುವುದಿಲ್ಲ' *(ಪು. ೩೯, ಶ್ಲೋ. ೪೪)* ಇಂತಹ ಜೀವನಕ್ಕೆ ಬೆಳಕು ನೀಡುವ ಸುಭಾಷಿತ ವಾಕ್ಯಗಳು ಅಲ್ಲಲ್ಲಿ ದೊರಕುತ್ತವೆ. ಅಂತ್ಯಲೀಲಾ ಅಧ್ಯಾಯದಲ್ಲಿ ನಿರೂಪಿತವಾಗಿ ರುವ ಶ್ರೀರಾಮಕೃಷ್ಣರ ಗಹನ ವೇದಾಂತ ತತ್ತ್ವಗಳನ್ನು ತಿಳಿಸುವ ಉಪದೇಶಗಳು ಅತ್ಯಂತ ಮನೋಹರವಾಗಿವೆ. ಅರಿಯದವನಿಗೂ ಮನದಟ್ಟಾಗುವಂತೆ ಸರಳಭಾಷೆಯಲ್ಲಿ ನಿರೂಪಿತವಾಗಿವೆ.

ಈ ಕಾವ್ಯದಲ್ಲಿ ಕೆಲವು ಸುಂದರವಾದ ಭಕ್ತಿಭಾವಭರಿತವಾದ ಸ್ತೋತ್ರ ಭಾಗಗಳೂ ಇವೆ. ಉದಾ: ಪು. ೧೫; ಶ್ಲೋ. ೮೬. 'ತ್ವಾಂ ಜ್ಞಾನಿಭಿಸ್ತತ್ತ್ವವಿಬೋಧನಾರ್ಥಂ.. ಪೂರ್ಣಮಹಂ ಪ್ರಪದ್ಯೇ'; ಪು.೪೫೬. ಶ್ಲೋ ೨೨: 'ನಮಃ ಪುರಸ್ತಾತ್ ಪುರಮಂಗಲಾಯ ಪೃಷ್ಠೇ ನಮಸ್ತೇ ಪ್ರಕೃತೇರ್ವಧಾಯ' ಇದು ಭಗವದ್ಗೀತೆಯ ೧೧ನೇ ಅಧ್ಯಾಯವನ್ನು ನೆನಪಿಗೆ ತರುತ್ತದೆ. 'ಶ್ರೀರಾಮಕೃಷ್ಣ ಮಮ ದೇಹಿ ಪದಾವಲಂಬಂ..'ಎಂದು ಕೊನೆಗೊಳ್ಳುವ ಶ್ರೀಶಂಕ ರರ ಲಕ್ಷ್ಮೀನೃಸಿಂಹ ಕರಾವಲಂಬ ಸ್ತೋತ್ರವನ್ನು ನೆನಪಿಗೆ ತರುವ ಸ್ತೋತ್ರಗಳೂ ಇಲ್ಲಿವೆ. *(ಪು ೪೫೭ -೫೮)*

ಶ್ರೀರಾಮಕೃಷ್ಣರೇ ಬರೆಸಿರುವುದು, ಇತರ ಗ್ರಂಥಗಳಲ್ಲಿಲ್ಲದ ಕೆಲವು ವಿಶಿಷ್ಟ ಅಂಶಗಳನ್ನು ಚಿತ್ರಿಸಿರುವುದು ಇದೇ ಮೊದಲಾದ ಕಾರಣಗಳಿಂದ ವಿಶಿಷ್ಟವಾದುದು ಈ ಕೃತಿ. ಶ್ರೀಸಿದ್ಧಾರೂಢ ಮಿಷನ್ ಆಶ್ರಮದ ಡಾ. ಆರೂಢಭಾರತಿಯವರು ಇದರ ಅತ್ಯಂತ ಸರಳವೂ ಸುಲಲಿತವೂ ಸಕಲಜನಗ್ರಾಹ್ಯವೂ ಆದ ಕನ್ನಡಾನು ವಾದವನ್ನು ಮಾಡಿದ್ದಾರೆ.

ಈ ಕೃತಿ ಸಾಧಕರೆಲ್ಲರಿಗೆ ಇದು ಅಚ್ಚುಮೆಚ್ಚಾಗುವುದರಲ್ಲಿ ಸಂಶಯವಿಲ್ಲ. ದೇವಭಾಷೆಯ ಪರಿಮಳದೊಡಗೂಡಿದ ಈ ಕೃತಿ ಆಧ್ಯಾತ್ಮಿಕ ಬಂಧುಗಳೆಲ್ಲರ ಮನೆಮನಗಳನ್ನು ತುಂಬಿ ಜ್ಞಾನ ಜ್ಯೋತಿಯನ್ನು ಬೆಳಗಲಿ.

*— ಡಾ. ಕೆ.ಎಲ್.ಪ್ರಸನ್ನಾಕ್ಷೀ*